ಬಾಳ ಗೀತೆಗೆ ಬೇಡ ಅಪಸ್ವರ

ಮಾನವ ಸಂಬಂಧಗಳು ಲೆಕ್ಕದ ಗಣಿತವಲ್ಲ. 2 + 2 = 4 ಎಂಬಂತೆಲ್ಲ ಬದುಕು. ಸಂಬಂಧಗಳು ಕಷ್ಟವಲ್ಲ ಎನಿಸಿದರೆ ಸುಲಭವೂ ಅಲ್ಲ. ಸಮಯ, ಪ್ರಯತ್ನ, ಅರ್ಪಣೆ ಎಲ್ಲವೂ ಬೇಕು. 'ನಿಮ್ಮ ಪ್ರೇಮವಿವಾಹ ನೀವೇ ಏರ್ಪಡಿಸಿಕೊಳ್ಳಿ' ಎಂಬುದು ಲೇಖಕಿ ಹಾಗೂ ಆಪ್ತಸಲಹೆಗಾರ್ತಿ ಮೀರಾ ರವಿ ಅವರ ಮಾತು. ಅದನ್ನು ಸಾಧ್ಯವಾಗಿಸುವುದು ಹೇಗೆ?

ಸಿ.ಜಿ.ಮಂಜುಳಾ

ವಿವಾಹ ಎನ್ನುವುದು ರೈಲ್ವೆ ನಿಲ್ದಾಣದಂತೆ. ವಿರುದ್ಧ ದಿಕ್ಕುಗಳಿಂದ ಇಬ್ಬರು ವ್ಯಕ್ತಿಗಳು ಧಾವಿಸಿ ಬರುತ್ತಿದ್ದಾರೆ. ದೊಡ್ಡ ಚೀಲಗಳನ್ನು ಹಿಡಿದಿರುವ ಇಬ್ಬರೂ ಕುರುಡಾಗಿ ಡಿಕ್ಕಿ ಹೊಡೆಯುತ್ತಾರೆ. ಕಲ್ಪಿಸಿಕೊಳ್ಳಿ... ಎಂತಹ ಗೊಂದಲ ಆಗಿರಬಹುದು!

ಇಬ್ಬರಿಗೂ ಪೆಟ್ಟಾಗುತ್ತದೆ. ಚೀಲಗಳು ಬೇರೆಯಾಗಿ ಹೋಗುತ್ತವೆ. ಎಲ್ಲವೂ ಚೆದುರಿ ಹೋಗುತ್ತವೆ. ಮುಂದೆ ಸಾಗುವ ಧಾವಂತದಲ್ಲಿ ಒಬ್ಬರು ಮೊದಲಿದ್ದುದಕ್ಕಿಂತ ಹೆಚ್ಚಿನ ಚೀಲಗಳನ್ನು ಹೊತ್ತುಕೊಳ್ಳುತ್ತಾರೆ.

ಅತಿಯಾದ ಭಾರದಿಂದ ಕುಸಿದು ಬಿದ್ದಾಗಷ್ಟೇ ಇನ್ನೊಬ್ಬರ ಭಾರವನ್ನೂ ಹೊತ್ತುಕೊಂಡಿದ್ದು ಬಿದ್ದ ವ್ಯಕ್ತಿಯ ಅರಿವಿಗೆ ಬರುತ್ತದೆ.

ವಿವಾಹವನ್ನು ಹೀಗೆ ಬಣ್ಣಿಸಿರುವ ಲೇಖಕಿ ಮೀರಾ ರವಿ. ಸಂಬಂಧದೊಳಗೆ ತಮ್ಮದೇ 'ಬ್ಯಾಗೇಜ್'ಗಳ ಬಗ್ಗೆ ಪತಿ-ಪತ್ನಿ ಇಬ್ಬರಿಗೂ ಅರಿವಿರಬೇಕು. ಪೆಟ್ಟಿನಿಂದ ತಪ್ಪಿಸಿಕೊಳ್ಳುವುದಲ್ಲದೆ ಸಂಗಾತಿಯ ಹೊರೆಯ ಬಗೆಗೂ ಪರಸ್ಪರ ಅರಿವು ಹೊಂದಿರಬೇಕು. ಹಾಗಾದರೆ ಇಂತಹ ಆಘಾತಗಳಾಗುವುದನ್ನು ತಪ್ಪಿಸುವುದಾದರೂ ಹೇಗೆ? ತಮಗೆ ಸೂಕ್ತರಾದವರು ಯಾರೆಂದು ಕಂಡುಕೊಳ್ಳುವುದು ಇಲ್ಲಿ ಮುಖ್ಯ. ಸಂಗಾತಿಯಲ್ಲಿ ಏನನ್ನು ನೋಡಬೇಕು? ಯಾರನ್ನು ತಪ್ಪಿಸಬೇಕು? ಸಮಸ್ಯೆಯ ಕ್ಷೇತ್ರಗಳನ್ನು ಗುರುತಿಸುವುದು ಹೇಗೆ?

ಇವೆಲ್ಲವನ್ನೂ ಕುರಿತು ಆಪ್ತಸಲಹೆಗಾರ್ತಿಯೂ ಆಗಿರುವ ಮೀರಾ ರವಿ ಪುಸ್ತಕವೊಂದನ್ನು ಬರೆದಿದ್ದಾರೆ. ಪುಸ್ತಕದ ಹೆಸರು 'ಅರೇಂಜ್ ಯುವರ್ ಲವ್ ಮ್ಯಾರೇಜ್'.

ತಂದೆ ತಾಯಿಗಳನ್ನು ಅಥವಾ ಸೋದರ ಸೋದರಿಯರನ್ನು ಆಯ್ಕೆ ಮಾಡಿಕೊಳ್ಳಲು ಯಾರಿಗೂ ಅವಕಾಶ ಇರುವುದಿಲ್ಲ. ಆದರೆ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಖಂಡಿತಾ ಇರುತ್ತದೆ. ಸರಿಯಾದ ಪ್ರಶ್ನೆಯನ್ನು ಸರಿಯಾದ ಕಾಲದಲ್ಲಿ ಕೇಳದಿದ್ದಲ್ಲಿ ಅಚ್ಚರಿಗಳನ್ನು ಎದುರುಗೊಳ್ಳಬೇಕಾಗುತ್ತದೆ. ಆಘಾತಕ್ಕೂ ಗುರಿಯಾಗಬಹುದು. ಇದಕ್ಕೆ ಇಲ್ಲೊಂದು ಉದಾಹರಣೆ ಇದೆ.

ಪತಿಯ ಸೋದರಿಯ ಕುಟುಂಬವೂ ಪತಿ ಮನೆಯಲ್ಲೇ ಇದೆ ಎಂಬುದು ಹುಡುಗಿಯೊಬ್ಬಳಿಗೆ ವಿವಾಹದ ನಂತರವಷ್ಟೇ ತಿಳಿಯುತ್ತದೆ. ಅದು ಆಕೆಗೆ ಆಘಾತ ತರುತ್ತದೆ.

ವಿವಾಹಕ್ಕೆ ಮೊದಲು ಸೋದರಿಯ ಬಗ್ಗೆ, ಭಾವಿ ಪತಿ ಒಟ್ಟಾಗಿ ಹೇಳಿದ್ದರೂ ಬಹುಶಃ ಆ ಸೋದರಿ ಕುಟುಂಬಕ್ಕೆ ಆಗಾಗ್ಗೆ ಭೇಟಿ ನೀಡುತ್ತಿರುತ್ತಾಳೆ ಎಂದಷ್ಟೇ ಭಾವಿಸಿಕೊಂಡಿದ್ದಳಂತೆ ಆಕೆ. ಇನ್ನು ಮನೆ ಇರುವುದು ಸೋದರಿಯ ಮಗನ ಹೆಸರಲ್ಲಿ ಎಂಬುದು ತಿಳಿದ ನಂತರವಂತೂ ವಿವಾಹದ ಆಧಾರವೇ ಅಲ್ಲಾಡಿಹೋಯಿತು. ಆದರೆ ವಿಚಿತ್ರವೆಂದರೆ ಮದುವೆಗೆ ಮುಂಚೆ ಅವರಿಬ್ಬರೂ ಒಂದು ವರ್ಷ ಕಾಲವಾದರೂ ಪರಸ್ಪರ ಭೇಟಿಯಾಗುತ್ತಿದ್ದರು.

2ನೇ ಪುಟ ನೋಡಿ

Arrange Your
LOVE
MARRIAGE

1 ನೇ ಪುಟದಿಂದ....

ವಿವಾಹದ ಗುರಿ ಒಟ್ಟಾಗಿ ಯೋಚಿಸುವುದು...

'ವಿವಾಹದ ಗುರಿ ಒಂದೇ ರೀತಿ ಯೋಚಿಸುವುದಲ್ಲ, ಒಟ್ಟಾಗಿ ಯೋಚಿಸುವುದು' ಎಂಬುದು ಇಲ್ಲಿ ಮನದಟ್ಟು ಮಾಡಿಕೊಳ್ಳಬೇಕಾಗಿರುವ ವಿಚಾರ.

ಸಂಬಂಧದ ಆರಂಭದ ಅವಧಿ ರೊಮ್ಯಾಂಟಿಕ್ ಆಗಿರಬಹುದು. ಎಲ್ಲವೂ ಪರಿಪೂರ್ಣ ಎಂದೂ ಅನಿಸಬಹುದು. ರೊಮ್ಯಾಂಟಿಕ್ ಪ್ರೀತಿಯ ಉನ್ಮಾದದಲ್ಲಿ ನೀವು ತೇಲಬಹುದು. ಆದರೆ 'ಪ್ರೀತಿ ಎನ್ನುವುದು ಆದರ್ಶ, ವಿವಾಹ ವಾಸ್ತವ ಸಂಗತಿ' ಎನ್ನುವುದು ತತ್ವಜ್ಞಾನಿ ಗಯಟೆಯ ಮಾತು. ಹೀಗಾಗಿಯೇ ವಿವಾಹಕ್ಕೆ ಮುಂಚೆಯೇ ಕ್ಲಿಷ್ಟಕರ ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಒಳ್ಳೆಯದು. ವಿವಾಹವಾದ ಮೇಲೆ ವ್ಯಕ್ತಿ ಬದಲಾಗುತ್ತಾನೆಂಬ ನಿರೀಕ್ಷೆ ಮಾತ್ರ ಎಂದಿಗೂ ಸಲ್ಲದು.

ಮೀರಾ ರವಿ ಅವರ 4ನೇ ಪುಸ್ತಕ ಇದು. ಸುಮಾರು 30 ವರ್ಷಗಳ ಹಿಂದೆ, ದೆಹಲಿಯಲ್ಲಿ 'ಬುಕ್ ಪಬ್ಲಿಶಿಂಗ್'ನಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಪಡೆದವರು ಅವರು.ವಿವಾಹದ ನಂತರ ಬೆಂಗಳೂರೇ ಅವರ ಊರಾಯಿತು. 'ವಿವಾಹದ ನಂತರ ಮನೆ ಮಕ್ಕಳು ನೋಡಿಕೊಳ್ಳುವುದೇ ಮುಖ್ಯ ಎನಿಸಿತ್ತು. 9ರಿಂದ 5 ರವರೆಗೆ ಹೊರಗೆ ದುಡಿಯುವ ಕೆಲಸ ಬೇಡವೆನಿಸಿತ್ತು. ಹೀಗಿದ್ದೂ ನಾನೂ 'ಮಲ್ಟಿ ಟಾಸ್ಕಿಂಗ್' ಮಹಿಳೆಯೇ ಆಗಿದ್ದೆ. ಏಕೆಂದರೆ ಆಗಲೇ ಪತಿಯ ಟೈರ್ ಬಿಸಿನೆಸ್‌ನಲ್ಲಿ ನೆರವಾಗಲು ತೊಡಗಿ, ನಂತರ ಪೂರ್ಣ ಪ್ರಮಾಣದಲ್ಲಿ ತೊಡಗಿಕೊಂಡೆ ಎಂದು ಟೈರ್ ಬಿಜಿನೆಸ್ ಅನುಭವಗಳನ್ನೂ ಆಕರ್ಷಕವಾಗಿ ವಿವರಿಸುತ್ತಾರೆ ಅವರು.

'ಹಲವರಿಗೆ ಟೈರ್‌ಗಳು ಟ್ಯೂಬ್‌ಗಳ ವಾಸನೆಗಳ ಮಧ್ಯೆ ಮಹಿಳೆ ಕೆಲಸ ಮಾಡುವುದು ನೋಡಿ ಸೋಜಿಗ ಎನಿಸುತ್ತಿತ್ತು. ಆದರೆ ನಾನು ನನ್ನ ಕೆಲಸದ ಬಗ್ಗೆ ಸೀರಿಯಸ್ ಆಗಿದ್ದೆ. ಪರಿಸ್ಥಿತಿಗಳನ್ನು ನಿಭಾಯಿಸುತ್ತಿದ್ದೆ. ಡೀಲರ್‌ಗಳ ಮೀಟಿಂಗ್ ಅಟೆಂಡ್ ಮಾಡುತ್ತಿದ್ದೆ. ಕೆಲವರು ಮಹಿಳೆ - ಟೈರ್ ಎಂಬುದು ಅರ್ಥವಾಗದೆ ನಿಮ್ಮ ಪತಿ ಜೊತೆ ಮಾತನಾಡುತ್ತೇವೆ ಎಂದೆಲ್ಲಾ ಹೇಳುತ್ತಿದ್ದರು' ಎಂದು ತಮ್ಮ ಅನುಭವಗಳನ್ನು ವಿವರಿಸುತ್ತಾರೆ.

'ನನ್ನ ಮಕ್ಕಳಿಗೆ 16 ವರ್ಷ ತುಂಬಿದ ನಂತರ, ನನ್ನ ಬದುಕಿನ ಮೌಲ್ಯಮಾಪನ ಮಾಡಿಕೊಳ್ಳಲು ತೊಡಗಿದೆ. ಸ್ಕಿಜೋಫ್ರೇನಿಯಾ ರೋಗಿಗಳ ಕುರಿತ ಸಂಸ್ಥೆಯೊಂದರಲ್ಲಿ ಒಂದು ವರ್ಷ ಕಾಲ ಗೌರವ ಸೇವೆ ಸಲ್ಲಿಸಿದ ನಂತರ 'ಆಪ್ತ ಸಲಹೆ' ಅಥವಾ ಕೌನ್ಸೆಲಿಂಗ್ ಅನ್ನು ನನಗೆ ತುಂಬಾ ಇಷ್ಟವಾದ ವಲಯವಾಗಿ ನಾನು ಕಂಡುಕೊಂಡೆ' ಎನ್ನುತ್ತಾರೆ ಅವರು.

ಕೌನ್ಸೆಲರ್ ಆಗುವ ಮುಂಚೆ ಸಾಕಷ್ಟು ಸ್ವಅರಿವು ಹೊಂದುವುದು ಅಗತ್ಯವಾಗುತ್ತದೆ. 2006ರಲ್ಲಿ ಅವರೇ ಬರೆದ ಪುಸ್ತಕದಲ್ಲಿ ಕೌನ್ಸೆಲರ್ ಆಯ್ಕೆ ಹೇಗೆ ಇತ್ಯಾದಿ ಮಾಹಿತಿಗಳಿವೆ.

ವಿವಾಹವಾಗುವ ಮುಂಚೆ ಯಾಕೆ ತಾವು ಮದುವೆ ಆಗುತ್ತಿದ್ದೇವೆ ಎಂಬ ಬಗ್ಗೆ ಅರಿವು ಇರಬೇಕು. ಎಷ್ಟೋ ಬಾರಿ ಹೊರಗೆ ಇಬ್ಬರು ವ್ಯಕ್ತಿಗಳೂ ತುಂಬಾ ಒಳ್ಳೆಯವರೇ ಆಗಿರುತ್ತಾರೆ. ಆದರೆ ದಂಪತಿಯಾಗಿ ಅವರು ತಮ್ಮ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. 'ಇಂದಿನ ದಿನಗಳಲ್ಲಿ ಒಪ್ಪಿಕೊಳ್ಳುವ ಗುಣವೂ ಕಡಿಮೆ. ಸಹಿಷ್ಣುತೆಯೂ ಕಡಿಮೆ. ಆದರೆ ನಿರೀಕ್ಷೆಗಳು ಹೆಚ್ಚು' ಎಂದು ಆಧುನಿಕ ಕಾಲದ ಜೀವನಶೈಲಿಯನ್ನು ಮೀರಾ ರವಿ ವಿವರಿಸುತ್ತಾರೆ.

'ವಿವಾಹಪೂರ್ವ ಆಪ್ತ ಸಲಹೆ'

'ಗೌರಮ್ಮನೂ ಬೇಡ. ಎಜುಕೇಟೆಡ್ ವರ್ಕಿಂಗ್ ವೈಫ್ ಬೇಕು' ಎನ್ನುವ ಹುಡುಗರಲ್ಲಿ ಹೆಣ್ಣಿನ ಕುರಿತಾದ ಸಾಂಪ್ರದಾಯಿಕ ಭಾವನೆಗಳಲ್ಲಿ ಮಾತ್ರ ಹೆಚ್ಚಿನ ಬದಲಾವಣೆ ಇಲ್ಲದಿರುವುದೂ ಸಂಬಂಧಗಳ ಸಂಘರ್ಷ ಹೆಚ್ಚಿಸಲು ಕೊಡುಗೆ ನೀಡುತ್ತಿದೆ. ತಮ್ಮ ಜೀವನಸಂಗಾತಿಯನ್ನು ತಾವೇ ಆರಿಸಿಕೊಳ್ಳುವುದು ಈಚಿನ ದಿನಗಳಲ್ಲಿ ಮಾಮೂಲಿನ ಸಂಗತಿಯೇ. ಶಾಲೆ/ಕಾಲೇಜು ಸ್ನೇಹಿತರು ಅಥವಾ ಕಚೇರಿ ಸಹೋದ್ಯೋಗಿಗಳ ಮಧ್ಯೆ ಈ ಆಯ್ಕೆ ನಡೆಯುತ್ತದೆ. ಒಡನಾಟದ ಅವಕಾಶ ಪ್ರೀತಿಯಲ್ಲಿ ಪರ್ಯವಸಾನವಾಗಬಹುದು. 'ವಿವಾಹಪೂರ್ವ ಆಪ್ತ ಸಲಹೆ' ಇಲ್ಲಿ ಅಗತ್ಯವಾಗುತ್ತದೆ. ಆದರೆ ನಮ್ಮ ರಾಷ್ಟ್ರದಲ್ಲಿನ್ನೂ ಈ ಬಗೆಯ ಚಿಂತನೆ ಇನ್ನೂ ಶೈಶವಾವಸ್ಥೆಯಲ್ಲಿದೆ. ಸರಿಯಾದ ಆಯ್ಕೆಗಳಿಗೆ ಹಾಗೂ ಭವಿಷ್ಯದ ಕಷ್ಟಕೋಟಲೆಗಳನ್ನು ತಪ್ಪಿಸಲು ಬಹುಶಃ ಈ ಬಗೆಯ ಕೌನ್ಸೆಲಿಂಗ್ ಅಗತ್ಯ ಎನ್ನುತ್ತಾರೆ ಮೀರಾ ರವಿ.

ಆಯ್ಕೆಯ ಸಂದರ್ಭದಲ್ಲಿ ಸೂಕ್ಷ್ಮಜ್ಞರಾಗಿರಬೇಕಾಗುತ್ತದೆ. 'ನಿಮ್ಮ ಜೊತೆ ಮಾತ್ರವಲ್ಲ..ಆತ ಹೇಗೆ ಬೇರೆಯವರ ಜೊತೆ ವರ್ತಿಸುತ್ತಾನೆ?ಆತನ ತಂದೆ ತಾಯಿ ಜೊತೆ ಆತನ ಸಂಬಂಧ ಹೇಗಿದೆ? ಸೋದರ ಸೋದರಿಯರ ಜೊತೆಗೆ ಹೇಗೆ? ಇವು ಮುಖ್ಯ' ಎನ್ನುವ ಅವರು ತಾವು ಬರೆದಿರುವ ಪುಸ್ತಕ ಹುಡುಗ-ಹುಡುಗಿ ಇಬ್ಬರಿಗೂ ಎನ್ನುತ್ತಾರೆ.

'ಗ್ಯಾರಂಟಿ ಟ್ಯಾಗ್' ಇಲ್ಲ...

ಪ್ರೇಮವಿವಾಹವಾಗಲಿ, ಹಿರಿಯರು ಏರ್ಪಡಿಸಿದ ವಿವಾಹವಾಗಲಿ 'ಗ್ಯಾರಂಟಿ ಟ್ಯಾಗ್' ಏನೂ ಇರುವುದಿಲ್ಲ. ವಾತ್ಸಲ್ಯ, ಹೊಣೆಗಾರಿಕೆ, ಗೌರವ, ಬದ್ಧತೆ, ಪ್ರೀತಿ ಹಾಗೂ ವಿಶ್ವಾಸಗಳಷ್ಟೇ ತಳಹದಿ.ಈ ಗುಣಗಳೇ ಸಂಬಂಧಗಳನ್ನು ಗಟ್ಟಿಗೊಳಿಸುವುದು. ಇದಕ್ಕೊಂದು ರೂಪಕವನ್ನು ಪುಸ್ತಕದಲ್ಲಿ ಮೀರಾ ರವಿ ನೀಡುತ್ತಾರೆ: ವಿವಾಹವನ್ನು ಪೋಷಿಸಬೇಕು. ಪ್ರತಿ ಕೆಲವು ಮೈಲಿಗಳಿಗೂ ವಿವಾಹವನ್ನು ಸುಸ್ಥಿತಿಯಲ್ಲಿಡಲು ಒಳ್ಳೆ ಕಂಡಿಷನ್‌ನಲ್ಲಿ ಇಡಲು ಸರ್ವೀಸ್ ಮಾಡಿಸುತ್ತಿರಬೇಕು. ಆಗಷ್ಟೇ ಸರಾಗ ಸವಾರಿ ಸಾಧ್ಯ.

ಪ್ರತಿ ಪ್ರಕರಣವೂ ಆಯಾಯಾ ಸಂದರ್ಭ ಹಾಗೂ ಅವರವರ ಅನುಭವಗಳನ್ನಾಧರಿಸಿ ತಂತಮ್ಮ 'ಸಲ್ಯೂಷನ್'ಕಂಡುಕೊಳ್ಳುವುದೂ ಮುಖ್ಯ. ಈ ಉದಾಹರಣೆ ನೋಡಿ: ಒಬ್ಬಾಕೆಯ ಪತಿ ಬದುಕೆಲ್ಲಾ ಕಳೆದಿದ್ದು ಹಾಸ್ಟೆಲ್‌ನಲ್ಲಿ. ಹೀಗಾಗಿ ಆತನಿಗೆ ಮನೆಯಲ್ಲಿ ಹೇಗಿರಬೇಕೆಂಬುದೇ ಗೊತ್ತಿಲ್ಲ.ಅನೇಕ ಸಲ ಆತನ ಜೊತೆಯಲ್ಲಿ ರೂಮಲ್ಲಿರುವುದೇ ಕಷ್ಟವಾಗುತ್ತಿತ್ತು. ಇದು ಬಿಟ್ಟರೆ ಅಷ್ಟೊಂದು ಕೆಟ್ಟದಾಗೇನೂ ಇರದಿದ್ದ ವಿವಾಹ ಮುಂದುವರಿಸಲು ಬೇರೆ ಬೇರೆ ಕೋಣೆಗಳಲ್ಲಿ ಇರಲು ಅವರಿಬ್ಬರೂ ರಾಜಿ ಮಾಡಿಕೊಂಡರು.

ಆಪ್ತ ಸಲಹೆ ಬದುಕಲ್ಲಿ ಪರಿವರ್ತನೆ ತರಬಲ್ಲುದು. ತಮ್ಮ ಸಂಬಂಧದ ಗುಟ್ಟು ಬಿಟ್ಟುಕೊಡಬೇಕಾದ ಹೆದರಿಕೆಯಿಂದ ವೃತ್ತಿಪರ ಕೌನ್ಸೆಲರ್ ಬಳಿ ಹೋಗಲು ತಮಗೆ ಹಿಂಜರಿಕೆ ಎಂದು ಕೆಲವು ಯುವಜನರು ನಿವೇದಿಸಿಕೊಳ್ಳುವುದೂ ಉಂಟು. ಆದರೆ ಬದುಕಿನ ಸುಖ ಶಾಂತಿ ಕಳೆದುಕೊಳ್ಳುವುದಕ್ಕಿಂತ ವೃತ್ತಿಪರ ಕೌನ್ಸೆಲರ್ ಮುಂದೆ ಅಂತರಂಗವನ್ನು ಬಿಚ್ಚಿಡುವುದು ಬಹುಶಃ ಒಳ್ಳೆಯದು.

ವಿವಾಹಿತರು, ಬದ್ಧತೆಯ ಸಂಬಂಧ ಹೊಂದಿದವರು ತಮ್ಮೊಳಗಿನ ಘರ್ಷಣೆಗಳು, ತಮ್ಮೊಳಗಿನ ಕೋಪ ಹಾಗೂ ಸಂಗಾತಿಯ ಕೋಪ ನಿರ್ವಹಣೆ ಇತ್ಯಾದಿಗಳ ಬಗ್ಗೆ ಕುಟುಂಬದ ಬೆಂಬಲ ಪಡೆದುಕೊಳ್ಳಬಹುದು. ಆದರೆ ಕೆಲವೊಮ್ಮೆ ಸಮಸ್ಯೆ ಪರಿಹಾರವಾಗುತ್ತಿಲ್ಲ ಎಂದಾದಾಗ ಪ್ರೊಫೆಷನಲ್ ಸಹಾಯವನ್ನು ಬೇಗ ಪಡೆಯುವುದು ಒಳ್ಳೆಯದು. ಆಗ ವಸ್ತುನಿಷ್ಠ ದೃಷ್ಟಿಕೋನದಿಂದ ಸಮಸ್ಯೆ ನಿರ್ವಹಣೆ ಸಾಧ್ಯವಾಗುತ್ತದೆ ಎಂಬುದು ಮೀರಾರವಿಯವರ ಪ್ರತಿಪಾದನೆ.

1 ನೇ ಪುಟದಿಂದ....

ವಿವಾಹದ ಗುರಿ ಒಟ್ಟಾಗಿ ಯೋಚಿಸುವುದು...

'ವಿವಾಹದ ಗುರಿ ಒಂದೇ ರೀತಿ ಯೋಚಿಸುವುದಲ್ಲ, ಒಟ್ಟಾಗಿ ಯೋಚಿಸುವುದು' ಎಂಬುದು ಇಲ್ಲಿ ಮನದಟ್ಟು ಮಾಡಿಕೊಳ್ಳಬೇಕಾಗಿರುವ ವಿಚಾರ.

ಸಂಬಂಧದ ಆರಂಭದ ಅವಧಿ ರೊಮ್ಯಾಂಟಿಕ್ ಆಗಿರಬಹುದು. ಎಲ್ಲವೂ ಪರಿಪೂರ್ಣ ಎಂದೂ ಅನಿಸಬಹುದು. ರೊಮ್ಯಾಂಟಿಕ್ ಪ್ರೀತಿಯ ಉನ್ಮಾದದಲ್ಲಿ ನೀವು ತೇಲಬಹುದು. ಆದರೆ 'ಪ್ರೀತಿ ಎನ್ನುವುದು ಆದರ್ಶ, ವಿವಾಹ ವಾಸ್ತವ ಸಂಗತಿ' ಎನ್ನುವುದು ತತ್ವಜ್ಞಾನಿ ಗಯಟೆಯ ಮಾತು. ಹೀಗಾಗಿಯೇ ವಿವಾಹಕ್ಕೆ ಮುಂಚೆಯೇ ಕ್ಲಿಷ್ಟಕರ ಪ್ರಶ್ನೆಗಳನ್ನು ಕೇಳಿಕೊಳ್ಳುವುದು ಒಳ್ಳೆಯದು. ವಿವಾಹವಾದ ಮೇಲೆ ವ್ಯಕ್ತಿ ಬದಲಾಗುತ್ತಾನೆಂಬ ನಿರೀಕ್ಷೆ ಮಾತ್ರ ಎಂದಿಗೂ ಸಲ್ಲದು.

ಮೀರಾ ರವಿ ಅವರ 4ನೇ ಪುಸ್ತಕ ಇದು. ಸುಮಾರು 30 ವರ್ಷಗಳ ಹಿಂದೆ, ದೆಹಲಿಯಲ್ಲಿ 'ಬುಕ್ ಪಬ್ಲಿಶಿಂಗ್'ನಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಪಡೆದವರು ಅವರು.ವಿವಾಹದ ನಂತರ ಬೆಂಗಳೂರೇ ಅವರ ಊರಾಯಿತು. 'ವಿವಾಹದ ನಂತರ ಮನೆ ಮಕ್ಕಳು ನೋಡಿಕೊಳ್ಳುವುದೇ ಮುಖ್ಯ ಎನಿಸಿತ್ತು. 9ರಿಂದ 5 ರವರೆಗೆ ಹೊರಗೆ ದುಡಿಯುವ ಕೆಲಸ ಬೇಡವೆನಿಸಿತ್ತು. ಹೀಗಿದ್ದೂ ನಾನೂ 'ಮಲ್ಟಿ ಟಾಸ್ಕಿಂಗ್' ಮಹಿಳೆಯೇ ಆಗಿದ್ದೆ. ಏಕೆಂದರೆ ಆಗಲೇ ಪತಿಯ ಟೈರ್ ಬಿಸಿನೆಸ್‌ನಲ್ಲಿ ನೆರವಾಗಲು ತೊಡಗಿ, ನಂತರ ಪೂರ್ಣ ಪ್ರಮಾಣದಲ್ಲಿ ತೊಡಗಿಕೊಂಡೆ ಎಂದು ಟೈರ್ ಬಿಜಿನೆಸ್ ಅನುಭವಗಳನ್ನೂ ಆಕರ್ಷಕವಾಗಿ ವಿವರಿಸುತ್ತಾರೆ ಅವರು.

'ಹಲವರಿಗೆ ಟೈರ್‌ಗಳು ಟ್ಯೂಬ್‌ಗಳ ವಾಸನೆಗಳ ಮಧ್ಯೆ ಮಹಿಳೆ ಕೆಲಸ ಮಾಡುವುದು ನೋಡಿ ಸೋಜಿಗ ಎನಿಸುತ್ತಿತ್ತು. ಆದರೆ ನಾನು ನನ್ನ ಕೆಲಸದ ಬಗ್ಗೆ ಸೀರಿಯಸ್ ಆಗಿದ್ದೆ. ಪರಿಸ್ಥಿತಿಗಳನ್ನು ನಿಭಾಯಿಸುತ್ತಿದ್ದೆ. ಡೀಲರ್‌ಗಳ ಮೀಟಿಂಗ್ ಅಟೆಂಡ್ ಮಾಡುತ್ತಿದ್ದೆ. ಕೆಲವರು ಮಹಿಳೆ - ಟೈರ್ ಎಂಬುದು ಅರ್ಥವಾಗದೆ ನಿಮ್ಮ ಪತಿ ಜೊತೆ ಮಾತನಾಡುತ್ತೇವೆ ಎಂದೆಲ್ಲಾ ಹೇಳುತ್ತಿದ್ದರು' ಎಂದು ತಮ್ಮ ಅನುಭವಗಳನ್ನು ವಿವರಿಸುತ್ತಾರೆ.

'ನನ್ನ ಮಕ್ಕಳಿಗೆ 16 ವರ್ಷ ತುಂಬಿದ ನಂತರ, ನನ್ನ ಬದುಕಿನ ಮೌಲ್ಯಮಾಪನ ಮಾಡಿಕೊಳ್ಳಲು ತೊಡಗಿದೆ. ಸ್ಕಿಜೋಫ್ರೇನಿಯಾ ರೋಗಿಗಳ ಕುರಿತ ಸಂಸ್ಥೆಯೊಂದರಲ್ಲಿ ಒಂದು ವರ್ಷ ಕಾಲ ಗೌರವ ಸೇವೆ ಸಲ್ಲಿಸಿದ ನಂತರ 'ಆಪ್ತ ಸಲಹೆ' ಅಥವಾ ಕೌನ್ಸೆಲಿಂಗ್ ಅನ್ನು ನನಗೆ ತುಂಬಾ ಇಷ್ಟವಾದ ವಲಯವಾಗಿ ನಾನು ಕಂಡುಕೊಂಡೆ' ಎನ್ನುತ್ತಾರೆ ಅವರು.

ಕೌನ್ಸೆಲರ್ ಆಗುವ ಮುಂಚೆ ಸಾಕಷ್ಟು ಸ್ವಅರಿವು ಹೊಂದುವುದು ಅಗತ್ಯವಾಗುತ್ತದೆ. 2006ರಲ್ಲಿ ಅವರೇ ಬರೆದ ಪುಸ್ತಕದಲ್ಲಿ ಕೌನ್ಸೆಲರ್ ಆಯ್ಕೆ ಹೇಗೆ ಇತ್ಯಾದಿ ಮಾಹಿತಿಗಳಿವೆ.

ವಿವಾಹವಾಗುವ ಮುಂಚೆ ಯಾಕೆ ತಾವು ಮದುವೆ ಆಗುತ್ತಿದ್ದೇವೆ ಎಂಬ ಬಗ್ಗೆ ಅರಿವು ಇರಬೇಕು. ಎಷ್ಟೋ ಬಾರಿ ಹೊರಗೆ ಇಬ್ಬರು ವ್ಯಕ್ತಿಗಳೂ ತುಂಬಾ ಒಳ್ಳೆಯವರೇ ಆಗಿರುತ್ತಾರೆ. ಆದರೆ ದಂಪತಿಯಾಗಿ ಅವರು ತಮ್ಮ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. 'ಇಂದಿನ ದಿನಗಳಲ್ಲಿ ಒಪ್ಪಿಕೊಳ್ಳುವ ಗುಣವೂ ಕಡಿಮೆ. ಸಹಿಷ್ಣುತೆಯೂ ಕಡಿಮೆ. ಆದರೆ ನಿರೀಕ್ಷೆಗಳು ಹೆಚ್ಚು' ಎಂದು ಆಧುನಿಕ ಕಾಲದ ಜೀವನಶೈಲಿಯನ್ನು ಮೀರಾ ರವಿ ವಿವರಿಸುತ್ತಾರೆ.

'ವಿವಾಹಪೂರ್ವ ಆಪ್ತ ಸಲಹೆ'

'ಗೌರಮ್ಮನೂ ಬೇಡ. ಎಜುಕೇಟೆಡ್ ವರ್ಕಿಂಗ್ ವೈಫ್ ಬೇಕು' ಎನ್ನುವ ಹುಡುಗರಲ್ಲಿ ಹೆಣ್ಣಿನ ಕುರಿತಾದ ಸಾಂಪ್ರದಾಯಿಕ ಭಾವನೆಗಳಲ್ಲಿ ಮಾತ್ರ ಹೆಚ್ಚಿನ ಬದಲಾವಣೆ ಇಲ್ಲದಿರುವುದೂ ಸಂಬಂಧಗಳ ಸಂಘರ್ಷ ಹೆಚ್ಚಿಸಲು ಕೊಡುಗೆ ನೀಡುತ್ತಿದೆ. ತಮ್ಮ ಜೀವನಸಂಗಾತಿಯನ್ನು ತಾವೇ ಆರಿಸಿಕೊಳ್ಳುವುದು ಈಚಿನ ದಿನಗಳಲ್ಲಿ ಮಾಮೂಲಿನ ಸಂಗತಿಯೇ. ಶಾಲೆ/ಕಾಲೇಜು ಸ್ನೇಹಿತರು ಅಥವಾ ಕಚೇರಿ ಸಹೋದ್ಯೋಗಿಗಳ ಮಧ್ಯೆ ಈ ಆಯ್ಕೆ ನಡೆಯುತ್ತದೆ. ಒಡನಾಟದ ಅವಕಾಶ ಪ್ರೀತಿಯಲ್ಲಿ ಪರ್ಯವಸಾನವಾಗಬಹುದು. 'ವಿವಾಹಪೂರ್ವ ಆಪ್ತ ಸಲಹೆ' ಇಲ್ಲಿ ಅಗತ್ಯವಾಗುತ್ತದೆ. ಆದರೆ ನಮ್ಮ ರಾಷ್ಟ್ರದಲ್ಲಿನ್ನೂ ಈ ಬಗೆಯ ಚಿಂತನೆ ಇನ್ನೂ ಶೈಶವಾವಸ್ಥೆಯಲ್ಲಿದೆ. ಸರಿಯಾದ ಆಯ್ಕೆಗಳಿಗೆ ಹಾಗೂ ಭವಿಷ್ಯದ ಕಷ್ಟಕೋಟಲೆಗಳನ್ನು ತಪ್ಪಿಸಲು ಬಹುಶಃ ಈ ಬಗೆಯ ಕೌನ್ಸೆಲಿಂಗ್ ಅಗತ್ಯ ಎನ್ನುತ್ತಾರೆ ಮೀರಾ ರವಿ.

ಆಯ್ಕೆಯ ಸಂದರ್ಭದಲ್ಲಿ ಸೂಕ್ಷ್ಮಜ್ಞರಾಗಿರಬೇಕಾಗುತ್ತದೆ. 'ನಿಮ್ಮ ಜೊತೆ ಮಾತ್ರವಲ್ಲ..ಆತ ಹೇಗೆ ಬೇರೆಯವರ ಜೊತೆ ವರ್ತಿಸುತ್ತಾನೆ?ಆತನ ತಂದೆ ತಾಯಿ ಜೊತೆ ಆತನ ಸಂಬಂಧ ಹೇಗಿದೆ? ಸೋದರ ಸೋದರಿಯರ ಜೊತೆಗೆ ಹೇಗೆ? ಇವು ಮುಖ್ಯ' ಎನ್ನುವ ಅವರು ತಾವು ಬರೆದಿರುವ ಪುಸ್ತಕ ಹುಡುಗ-ಹುಡುಗಿ ಇಬ್ಬರಿಗೂ ಎನ್ನುತ್ತಾರೆ.

'ಗ್ಯಾರಂಟಿ ಟ್ಯಾಗ್' ಇಲ್ಲ...

ಪ್ರೇಮವಿವಾಹವಾಗಲಿ, ಹಿರಿಯರು ಏರ್ಪಡಿಸಿದ ವಿವಾಹವಾಗಲಿ 'ಗ್ಯಾರಂಟಿ ಟ್ಯಾಗ್' ಏನೂ ಇರುವುದಿಲ್ಲ. ವಾತ್ಸಲ್ಯ, ಹೊಣೆಗಾರಿಕೆ, ಗೌರವ, ಬದ್ಧತೆ, ಪ್ರೀತಿ ಹಾಗೂ ವಿಶ್ವಾಸಗಳಷ್ಟೇ ತಳಹದಿ.ಈ ಗುಣಗಳೇ ಸಂಬಂಧಗಳನ್ನು ಗಟ್ಟಿಗೊಳಿಸುವುದು. ಇದಕ್ಕೊಂದು ರೂಪಕವನ್ನು ಪುಸ್ತಕದಲ್ಲಿ ಮೀರಾ ರವಿ ನೀಡುತ್ತಾರೆ: ವಿವಾಹವನ್ನು ಪೋಷಿಸಬೇಕು. ಪ್ರತಿ ಕೆಲವು ಮೈಲಿಗಳಿಗೂ ವಿವಾಹವನ್ನು ಸುಸ್ಥಿತಿಯಲ್ಲಿಡಲು ಒಳ್ಳೆ ಕಂಡಿಷನ್‌ನಲ್ಲಿ ಇಡಲು ಸರ್ವೀಸ್ ಮಾಡಿಸುತ್ತಿರಬೇಕು. ಆಗಷ್ಟೇ ಸರಾಗ ಸವಾರಿ ಸಾಧ್ಯ.

ಪ್ರತಿ ಪ್ರಕರಣವೂ ಆಯಾಯಾ ಸಂದರ್ಭ ಹಾಗೂ ಅವರವರ ಅನುಭವಗಳನ್ನಾಧರಿಸಿ ತಂತಮ್ಮ 'ಸಲ್ಯೂಷನ್'ಕಂಡುಕೊಳ್ಳುವುದೂ ಮುಖ್ಯ. ಈ ಉದಾಹರಣೆ ನೋಡಿ: ಒಬ್ಬಾಕೆಯ ಪತಿ ಬದುಕೆಲ್ಲಾ ಕಳೆದಿದ್ದು ಹಾಸ್ಟೆಲ್‌ನಲ್ಲಿ. ಹೀಗಾಗಿ ಆತನಿಗೆ ಮನೆಯಲ್ಲಿ ಹೇಗಿರಬೇಕೆಂಬುದೇ ಗೊತ್ತಿಲ್ಲ.ಅನೇಕ ಸಲ ಆತನ ಜೊತೆಯಲ್ಲಿ ರೂಮಲ್ಲಿರುವುದೇ ಕಷ್ಟವಾಗುತ್ತಿತ್ತು. ಇದು ಬಿಟ್ಟರೆ ಅಷ್ಟೊಂದು ಕೆಟ್ಟದಾಗೇನೂ ಇರದಿದ್ದ ವಿವಾಹ ಮುಂದುವರಿಸಲು ಬೇರೆ ಬೇರೆ ಕೋಣೆಗಳಲ್ಲಿ ಇರಲು ಅವರಿಬ್ಬರೂ ರಾಜಿ ಮಾಡಿಕೊಂಡರು.

ಆಪ್ತ ಸಲಹೆ ಬದುಕಲ್ಲಿ ಪರಿವರ್ತನೆ ತರಬಲ್ಲುದು. ತಮ್ಮ ಸಂಬಂಧದ ಗುಟ್ಟು ಬಿಟ್ಟುಕೊಡಬೇಕಾದ ಹೆದರಿಕೆಯಿಂದ ವೃತ್ತಿಪರ ಕೌನ್ಸೆಲರ್ ಬಳಿ ಹೋಗಲು ತಮಗೆ ಹಿಂಜರಿಕೆ ಎಂದು ಕೆಲವು ಯುವಜನರು ನಿವೇದಿಸಿಕೊಳ್ಳುವುದೂ ಉಂಟು. ಆದರೆ ಬದುಕಿನ ಸುಖ ಶಾಂತಿ ಕಳೆದುಕೊಳ್ಳುವುದಕ್ಕಿಂತ ವೃತ್ತಿಪರ ಕೌನ್ಸೆಲರ್ ಮುಂದೆ ಅಂತರಂಗವನ್ನು ಬಿಚ್ಚಿಡುವುದು ಬಹುಶಃ ಒಳ್ಳೆಯದು.

ವಿವಾಹಿತರು, ಬದ್ಧತೆಯ ಸಂಬಂಧ ಹೊಂದಿದವರು ತಮ್ಮೊಳಗಿನ ಘರ್ಷಣೆಗಳು, ತಮ್ಮೊಳಗಿನ ಕೋಪ ಹಾಗೂ ಸಂಗಾತಿಯ ಕೋಪ ನಿರ್ವಹಣೆ ಇತ್ಯಾದಿಗಳ ಬಗ್ಗೆ ಕುಟುಂಬದ ಬೆಂಬಲ ಪಡೆದುಕೊಳ್ಳಬಹುದು. ಆದರೆ ಕೆಲವೊಮ್ಮೆ ಸಮಸ್ಯೆ ಪರಿಹಾರವಾಗುತ್ತಿಲ್ಲ ಎಂದಾದಾಗ ಪ್ರೊಫೆಷನಲ್ ಸಹಾಯವನ್ನು ಬೇಗ ಪಡೆಯುವುದು ಒಳ್ಳೆಯದು. ಆಗ ವಸ್ತುನಿಷ್ಠ ದೃಷ್ಟಿಕೋನದಿಂದ ಸಮಸ್ಯೆ ನಿರ್ವಹಣೆ ಸಾಧ್ಯವಾಗುತ್ತದೆ ಎಂಬುದು ಮೀರಾರವಿಯವರ ಪ್ರತಿಪಾದನೆ.